HEGDE HEART BEATS

# ಮಳೆಯಲಿ... ಜೊತೆಯಲಿ...

## ...ಅಂದು ಅವಳೊಂದಿಗೆ... ಅವಳ ನೆನಪಿನೊಂದಿಗೆ ಇಂದು

ಅಕ್ಷರ ಹೆಗಡೆ

This is story is written on occasion of  Valentine's Day.  Your suggestions and comments are needed to improve the quality of my writing. You can find more poems and stories in hegdeheartbeats.weebly.com

**THE BEGINNING**

ಮಲೆನಾಡಿನ ಮಡಿಲಿನಲ್ಲಿರುವ ಒಂದು ಊರು. ಮಳೆಗಾಲದ ಸಮಯ. ತಿಂಗಳಿನಿಂದ ಸುರಿಯುತ್ತಿದ್ದ ಕುಂಭದ್ರೋಣ ಮಳೆ ನಾಲ್ಕೈದು ದಿನಗಳಿಂದ ಸ್ವಲ್ಪ ಕಡಿಮೆಯಾಗಿತ್ತು. ಆದರೂ ಮೋಡಗಳು ಮಾತ್ರ ಆಕಾಶವನ್ನೆಲ್ಲಾ ಆವರಿಸಿಕೊಂಡೇ ಇದ್ದವು. ಸಂಜೆ ನಾಲ್ಕಕ್ಕೇ ಆರು ಗಂಟೆಯಾದಂತೆ ತೋರುತ್ತಿತ್ತು.

**CHAPTER - 1**

ಅವನು ಮನೆಯಿಂದ ಹೊರಬಂದು ಆಕಾಶದೆಡೆಗೆ ದಿಟ್ಟಿಸಿದ. ಮೋಡಗಳು ಸೂರ್ಯನನ್ನು ಮರೆಮಾಡಿದ್ದವು. ಮಂಜು ಮುಸುಕಿದ ಹೊರಗಿನ ವಾತಾವರಣ, ಇವನ ಮನಸಿನೊಳಗಿನ ಹವಾಮಾನವೆರಡು ಒಂದೇ ಎಂಬಂತಾಗಿತ್ತು. ಒಮ್ಮೆ ನಿಡಿದಾದ ಉಸಿರುಬಿಟ್ಟು ಕಾಡಿನೊಳಗೆ ಹೆಜ್ಜೆ ಹಾಕಿದ.

ಮಳೆ ಬರುವ ಸೂಚನೆಯಿದ್ದರೂ ನದಿಯತ್ತ ಮುಖ ಮಾಡಿ ನಿಧಾನವಾಗಿ ಸಾಗಿದ. ಕಾಡನ್ನು ದಾಟುವುದರೊಳಗಾಗಿ ಮಳೆ ಸಣ್ಣಗೆ ಜಿನುಗ ತೊಡಗಿತು. ಅದರ ಪರಿವೇ ಇವನಿಗಿಲ್ಲ. ಬೇಲಿಯನ್ನು ದಾಟಿ ಹೊರಕ್ಕಡಿಯಿಟ್ಟಾಗ ಕಂಡಿದ್ದು ದೂರದಲ್ಲಿದ್ದ ನದಿ. ಒಮ್ಮೆ ಸುತ್ತಲೂ ಕಣ್ಣು ಹಾಯಿಸಿದಾಗ ಕಂಡಿದ್ದು ಹಸಿರು ತುಂಬಿದ ಸುಂದರ ಕಾಡು. ಇದೇ ಕಾಡಿನಲ್ಲಿಯೇ ಅಲ್ಲವೇ ತಾನು ಸಣ್ಣವನಿದ್ದಾಗ ಸುತ್ತಾಡಿದ್ದು, ಮನಸಿಗೆ ಸಂತೋಷ ಕೊಡುತ್ತಿದ್ದ ಜಾಗವೀಗೇಕೆ ನೀರಸವೆನಿಸುತ್ತಿದೆ ಅಂದುಕೊಂಡ.

ಕೆಲಸಕ್ಕೆ ನಾಲ್ಕು ದಿನಗಳ ರಜೆ ಹಾಕಿ ಮನೆಗೆ ಬಂದಿದ್ದನಾತ. ಮೂರು ದಿನಗಳಾಗಲೇ ಮನೆಯೊಳಗೇ ಕೂತು ಕಳೆದಿದ್ದ. ಚಿಕ್ಕಂದಿನಲ್ಲಿ ಓಡಾಡುತ್ತಿದ್ದ ಗುಡ್ಡ-ಬೆಟ್ಟ, ಕಾಡಿನ ಕಡೆಯೂ ಹೋಗುವ ಮನಸ್ಸು ಮಾಡಿರಲಿಲ್ಲ. ನಾಳೆ ಬೆಳಗ್ಗೆ ಮತ್ತೆ ಕೆಲಸಕ್ಕೆ ಹಿಂದಿರುಗಬೇಕು ಎಂದು ಮನಸಿಗೆ ಬರುತ್ತಲೇ ಏಕೋ ಕಸಿವಿಸಿಗೊಂಡಿದ್ದ. ನದಿಯ ಕಡೆಗೊಮ್ಮೆ ಹೋಗಿ ಬರೋಣವೆಂದು  ತೀರ್ಮಾನಿಸಿ ಹೊರಗೆ ಬಂದಿದ್ದ.

ಮಳೆ ಜೋರಾಗಿ ಸುರಿಯತೊಡಗಿತು. ಆದರೂ ಮುಂದುವರೆದು ನದಿಯ ದಂಡೆಯ ತುತ್ತತುದಿಯಲ್ಲಿ ಹೋಗಿ ನಿಂತು ಕೆಳಗೆ ನೋಡಿದ. ನದಿಯು ತನ್ನೊಳಗೆ ಬಾ ಎಂಬಂತೆ ಕರೆಯುವಂತೆನಿಸಿತು. ಹಾಗೇ ನೀರನ್ನೇ ಧಿಟ್ಟಿಸಿ ನೋಡುತ್ತಾ ನಿಂತುಬಿಟ್ಟ. ನಿಧಾನವಾಗಿ ಅಲ್ಲಿ ಅವಳ ಬಿಂಬ ಮೂಡತೊಡಗಿತು.

---------------->>                                                  <<----------------

**CHAPTER - 2**

ಅವಳ ಮುಖದತ್ತಲೇ ಮುಗುಳ್ನಗುತ್ತಾ ನೋಡುತ್ತಿದ್ದ. ಆಕೆ ಇದಾವುದರ ಕಡೆ ಗಮನವೀಯದೆ ಮೊಬೈಲ್ ಹಿಡಿದು ಫೇಸ್ಬುಕ್ಕಿನಲ್ಲಿ ಬಂದಿದ್ದ ಸಂದೇಶಗಳಿಗೆ ಮರುತ್ತರವನ್ನು ಕಳುಹಿಸುವುದರಲ್ಲೇ ಮಗ್ನಳಾಗಿದ್ದಳು. ಇವನು ಅವಳನ್ನು ನೋಡುವ ಕಾರ್ಯವನ್ನು ಮುಂದುವರೆಸಿದ್ದ. ಭೋರೆಂದು ಬೀಸುತ್ತಿದ್ದ ಗಾಳಿಯಾಗಲೀ, ಒಂದೇ ಸಮನೆ ಅರ್ಧ ಗಂಟೆಯಿಂದ ಸುರಿಯುತ್ತಿದ್ದ ಅಬ್ಬರದ ಮಳೆಯಾಗಲಿ ಇಬ್ಬರ ಕೆಲಸಕ್ಕೂ ವಿಘ್ನ ತಂದಿರಲಿಲ್ಲ. [smiley of EYE_WINK]

'ಮಳೆ ಬತ್ತು, ಈಗೆಂತಕೆ ಹೋಗ್ತ್ರ' ಎಂದು ಮನೆಯಲ್ಲಿ ಗದರಿದ್ದರೂ, ಅವುಗಳನ್ನು ಕಿವಿಗೆ ಹಾಕಿಕೊಳ್ಳದೆ ಹತ್ತಿರದ ಬೆಟ್ಟದ ಕಡೆಗೆ ಸಾಗಿದ್ದರು. ಅದೂ ಫೇಸ್ಬುಕ್ ನೋಡಲು. ಸಾಮಾಜಿಕ ತಾಣದ ಸೆಳೆತ ಅಂದ್ರೆ ಇದೆ ಅಲ್ವೇ?. ಚಿಕ್ಕಂದಿನಿಂದಲೂ ಒಟ್ಟಿಗೆ ಬೆಳೆದು ಬಂದಿದ್ದರಿಂದ ಇವರ ಸ್ನೇಹ ಗಾಢವಾಗಿತ್ತು. ಆದ್ದರಿಂದ ಯಾವುದೇ ಮುಚ್ಚುಮರೆಯಿಲ್ಲದೇ ಎಲ್ಲಾ ವಿಷಯವಾಗಿ ಮಾತನಾಡಿಕೊಳ್ಳುತ್ತಿದ್ದರು. ದಾರಿಯಲ್ಲಿ ಹೀಗೆ ಹರಟುತ್ತಾ ಬಂದು ಬೆಟ್ಟವನ್ನು ಏರಿ ನಿಂತಿದ್ದರು.

ಸ್ವಲ್ಪ ಸಮಯಕ್ಕೆ  ಮಳೆ ಶುರುವಿಟ್ಟಿತ್ತು. ಜೊತೆಗೆ ಛತ್ರಿಯನ್ನು ಸರಿಯಾಗಿ ಹಿಡಿದು ನಿಲ್ಲಲು ಆಗದಷ್ಟು ಗಾಳಿ ಬೇರೆ. ಇನ್ನೇನು ಮಾಡುವುದು ಎಂದು ತೋಚದೆ, ತನ್ನ ಛತ್ರಿಯನ್ನು ಮಡಚಿ, ಇವನ ಛತ್ರಿಯಲ್ಲಿಯೇ ಸೇರಿ ಮೊಬೈಲ್ ನಲ್ಲಿ ತನ್ನ ಕಾರ್ಯವನ್ನು ಮುಂದುವರೆಸಿದಳು. ಇವನಿಗೊ ಒಳಗೊಳಗೇ 'ನೀ ಸನಿಹಕೆ ಬಂದರೆ' ಸಾಲುಗಳು ಮನದಲ್ಲಿ ಗುನುಗಲು ಆರಂಭಿಸಿತು. ಮಳೆಯಲ್ಲಿ ಹಾಡುವ ಸನ್ನಿವೇಶದ ಎಲ್ಲ ಹಾಡುಗಳು ನೆನಪಿಗೆ ಬರತೊಡಗಿದವು. ಎದೆಯ ಬಡಿತದಲ್ಲಿ ಏರುಪೇರಾದ ಅನುಭವ. ಅವನ ಮುಖದಲ್ಲಿ ಕಿರುನಗುವೊಂದು ಮೂಡಿತು. ಹಾಗೆ ಅವಳನ್ನೇ ನೋಡುತ್ತಾ ನಿಂತುಬಿಟ್ಟ. ಅವಳ ದೃಷ್ಟಿ ಮೊಬೈಲ್ ಮೇಲೆ, ಇವನ ದೃಷ್ಟಿ ಅವಳ ಮೇಲೆ. (ಮಾರಿ ಕಣ್ಣು ಹೋರಿ ಮ್ಯಾಗೆ, ಇವನ ಕಣ್ಣು ಅವಳ ಮ್ಯಾಗೆ [smiley of EYE_WINK])

ಮಳೆಯು ಇನ್ನೂ ಹೆಚ್ಚಾಗುತ್ತಲೇ ಇತ್ತು ವಿನಹ ಸಧ್ಯಕ್ಕೆ ಕಡಿಮೆಗೊಳ್ಳುವ ಯಾವುದೇ ಲಕ್ಷಣಗಳು ಕಾಣಲಿಲ್ಲ. ಗಾಳಿಯಿಂದ ಕೂಡಿದ ಮಳೆಯಿಂದ ಇಬ್ಬರೂ ಸಂಪೂರ್ಣ ಒದ್ದೆಯಾಗಿ ಹೋಗಿದ್ದರು. ತಡೆಯಲಾರದಷ್ಟು ಚಳಿ ಬೇರೆ. ನಂಬಿಕೆಯ ಭದ್ರ ಬುನಾದಿಯ ಮೇಲೆ ನಿಂತಿರುವ ಸ್ನೇಹ ಎಷ್ಟೇ ಗಾಢವಾಗಿದ್ದರೂ, ಸಮಯ-ಸಂಧರ್ಭದ ಪ್ರಭಾವಕ್ಕೆ ಒಳಗಾದ ವ್ಯಕ್ತಿಯು ಬಲಹೀನನಾಗುತ್ತಾನೆ. ವಿವೇಕ ಕೈಕೊಡುತ್ತದೆ. ಮನಸಿನ ಮೇಲಿನ ಹಿಡಿತ ಸಡಿಲಗೊಳ್ಳುತ್ತದೆ.

----------------->>  <<------------------

**CHAPTER - 3**

'ಸೈರನ್'ನ ಸದ್ದು ಕೇಳಿ, ಮಲಗಿದ್ದವನು ಧಢಕ್ಕನೆ ನಿದ್ದೆಯಿಂದೆದ್ದು ಕುಳಿತ. ಪಕ್ಕದಲ್ಲಿದ್ದ ಮೊಬೈಲ್ ಬೆಳಕನ್ನು ಚೆಲ್ಲುತ್ತಾ ಸಂದೇಶವೊಂದು ಬಂದಿದೆ ಎಂದು ತೋರಿಸುತ್ತಿತ್ತು. ನಿದ್ದೆ ಕೆಡಿಸಿದ್ದಕ್ಕೆ ಗೊಣಗುತ್ತಲೇ ಲಾಕ್ ಓಪನ್ ಮಾಡಿ ನೋಡುತ್ತಾನೆ,... ಅದು ಬಂದಿರೋದು ತನ್ನ ಸ್ನೇಹಿತೆಯಿಂದ. 'ವ್ಯಾಟ್ಸ್ಆಪ್ನಲ್ಲಿ ಆನ್‌ಲೈನ್ ಬಾ' ಎಂದು ಕಳುಹಿಸಿದ್ದಳು. ಅದನ್ನು ಓದುತ್ತಿದ್ದಂತೆಯೇ ನಿದ್ದೆಯೆಲ್ಲ ಹಾರಿಹೋಗಿತ್ತು. ಎರಡೇ ಕ್ಷಣದಲ್ಲಿ ವಾಟ್ಸ್ಆಪ್ನಲ್ಲಿ ಲ್ಯಾಂಡ್ ಆಗಿದ್ದ. ಅವಳಿಂದ ಆಗಲೇ 'ಹಾಯ್' ಎಂದು ಬಂದಾಗಿತ್ತು.

ಇವನು ನಗರಕ್ಕೆ ಬಂದು ನೆಲೆಸಿ ನಾಲ್ಕು ತಿಂಗಳ ಮೇಲಾಗಿತ್ತು. ಅವಳು ಕೂಡ ರಜೆಯನ್ನು ಮುಗಿಸಿ ಕಾಲೇಜಿಗೆ ಮರಳಿದ್ದಳು. ಆದರೆ ಇಬ್ಬರ ಮಧ್ಯೆ ಸ್ನೇಹ ಹಾಗೆಯೇ ಮುಂದುವರೆದಿತ್ತು. ಆಗಾಗ ಕಾಲ್ ಮಾಡಿ ಮಾತನಾಡುತ್ತಿದ್ದರು. ಮೆಸೇಜ್ ಮಾಡಿ ಹರಟುತ್ತಿದ್ದರು. ಭೌತಿಕವಾಗಿ ನೂರಾರು ಮೈಲಿಗಳ ಅಂತರವಿದ್ದರೂ ಮನಸಿನಲ್ಲಿ ಅಂತರವೇ ಇರಲಿಲ್ಲ. ಆದರೆ ಸಮಯ ನಿಂತಿರುವುದಿಲ್ಲ. (Everyday will not be Sunday). ಯೋಚನೆಗಳು ಬದಲಾಗುತ್ತಿರುತ್ತವೆ.

ಇವನೂ 'ಹಾಯ್, ಎಂತ ಮಾಡ್ತಿದ್ದೆ? ಒಂದ್ ವಾರದಿಂದ ಪತ್ತೇನೆ ಇರ್ಲೇ.. ಏನ್ ಕತೆ' ಎಂದು ಮರುತ್ತರಿಸಿದ. ಹೀಗೆ ತಮ್ಮ ಹರಟೆಯನ್ನು ಮುಂದುವರೆಸಿದರು. ಎಲ್ಲವೂ ಸರಿಯಾಗೇ ಇತ್ತು... ಈತ ಆ ಸಂದೇಶವನ್ನು ಕಳುಹಿಸುವವರೆಗೆ. ಅವಳದನ್ನು ಓದಿದ ಸೂಚನೆಯಾಗಿ ನೀಲಿ ಗುರುತು ಬಂದು ಒಂದು ನಿಮಿಷದ ಒಳಗಾಗಿ ಆಕೆಯ ಪ್ರೊಫೈಲ್ ಚಿತ್ರ ಮಾಯವಾಗಿ, ತಾನು ಸಂಪರ್ಕ ಪಟ್ಟಿಯಲ್ಲಿ ಉಳಿಸಿಟ್ಟಿದ್ದ ಫೋಟೋ ಬಂದಿತ್ತು. 'ಲಾಸ್ಟ್ ಸೀನ್' ಕಣ್ಮರೆಯಾಗಿತ್ತು. ಹಾಗಾದರೆ ಆತ ಕಳುಹಿಸಿದ ಸಂದೇಶದಲ್ಲಿ ಏನಿತ್ತು? ಮಳೆಯಲ್ಲಿ ನಡೆದ ಘಟನೆಯನ್ನೇನಾದರೂ ಮತ್ತೆ ನೆನಪಿಸಿದನೇ?

---------------->> <<---------------

**CHAPTER - 4**

ಆಕೆ ಸುಮ್ಮನೆ ಮೌನವಾಗಿ ಕೂತಿದ್ದಳು. ಅಳುವನ್ನು ತಡೆಯಲು ಪ್ರಯತ್ನಿಸಿದರೂ ದುಃಖ ಉಮ್ಮಳಿಸಿ ಬರುತ್ತಿತ್ತು. ಕಣ್ಣೀರು ತನ್ನ ಪಾಡಿಗೆ ತಾನು ಕೆನ್ನೆಯ ಮೇಲೆ ಜಾರುತ್ತಿತ್ತು. ಆದರೆ ಮನಸು ಮಾತ್ರ ತನ್ನಷ್ಟಕ್ಕೆ ತಾನು ಯೋಚಿಸುತ್ತಿತ್ತು - ' ತನಗೆ ಏನೇ ಹೇಳಿದ್ದರೂ ಸಹಿಸಿಕೊಳ್ಳುತ್ತಿದ್ದೆ. ಆದರೆ ತನ್ನ ಸ್ನೇಹಿತರ ಬಗ್ಗೆ ಅಷ್ಟು ಅಗ್ಗದ ಮಾತುಗಳನ್ನಾಡುತ್ತಾನೆಂದರೆ... ಛೀ.. ಹೇಗೆ ತಾನೇ ಸಹಿಸಿಕೊಳ್ಳುವುದು..? ಇಷ್ಟು ವರ್ಷ ಸ್ನೇಹಿತನಾಗಿದ್ದುಕೊಂಡು, ಸ್ನೇಹದ ಬಗ್ಗೆ ಇಷ್ಟು ಹೀನಾಯವಾಗಿ ಮಾತನಾಡಿದನೆ..? ತಾನು ಯಾವಾಗಲೂ ಅವನ ಪರವಾಗಿಯೇ ಇರುತ್ತಿದ್ದೆ. ಆದರೆ ಈಗ ಏಕೆ ಈ ರೀತಿ ಯೋಚಿಸಿದನು?'

'ಇನ್ನೆಂದೂ ತನ್ನೊಂದಿಗೆ ಮಾತನಾಡುವ ಅಥವಾ ಭೇಟಿಯಾಗುವ ಪ್ರಯತ್ನವನ್ನಾಗಲಿ ಮಾಡಬೇಡ ಎಂದು ಸ್ನೇಹಕ್ಕೆ ಪೂರ್ಣ ವಿರಾಮ ಹಾಡಿದಳು. ತಾನು ಕಳುಹಿಸಿದ್ದಾದರೂ ಏನು? ಅದರಲ್ಲಿ ಅವಳಿಗೆ ನೋವಾಗುವಂತಹ ಪದಗಳು ಏನಿದ್ದವು? ಆದರೆ ಅವಳು ಕೊಟ್ಟ ಕಾರಣಗಳನ್ನು ಅವಲೋಕಿಸಿದರೆ, ಆ ಸಂದೇಶವನ್ನೇ ತಪ್ಪಾಗಿ ಅರ್ಥೈಸಿಕೊಂಡಿದ್ದಾಳೆ ಎಂದು ಸ್ಪಷ್ಟವಾಗುತ್ತದೆ. ತನ್ನ ಸ್ನೇಹಿತರಿಗೆ ಅವಹೇಳನ ಮಾಡಿದ್ದಕ್ಕಾಗಿ ಬ್ಲಾಕ್ ಮಾಡಿದೆ ಎಂದು ಹೇಳಿದ್ದು ಇದೇ ಉದ್ದೇಶದಿಂದ. ತಾನು ಹೇಳಿದ್ದು ಅವಳಿಗೇ, ಅವಳ ಸ್ನೇಹಿತರಿಗಲ್ಲ ಎಂಬುದನ್ನು ಹೇಗೆ ಮನವರಿಕೆ ಮಾಡಿಕೊಡಲಿ. ತಾನು ಅವಳನ್ನು ಗುರಿಯಾಗಿಸಿ ಯಾವಾಗಲೂ ಹೇಳುವಂತೆಯೇ ಹೇಳಿದ್ದೆ. ಆದರೆ ಇಂದೇಕೆ ತಪ್ಪಾಗಿ ಗ್ರಹಿಸಿದಳು? ಆದರೆ ಅವಳ ಈ ಚಿಕ್ಕ ತಪ್ಪು ಗ್ರಹಿಕೆಯೇ ನಮ್ಮ ಸ್ನೇಹ-ಪ್ರೀತಿಯ ಅಂತ್ಯಕ್ಕೆ ಕಾರಣವಾಯಿತೇ? ಅಂದು ಅಂತಹ ಜಡಿಮಳೆಯಲ್ಲೂ, ಸಂಪೂರ್ಣ ಏಕಾಂತದ ಸಮಯದಲ್ಲಿ ಪೂರ್ಣ ನೆನೆದು ಚಳಿಯಲ್ಲಿ ನಿಂತಿದ್ದಾಗಲೂ ಕೂಡ ತನ್ನ ಮೇಲಿನ ನಂಬಿಕೆ ಮಾಸಿ, ಸ್ನೇಹ ಮುರಿಯಬಾರದೆಂಬ ಕಾರಣಕ್ಕೆ ಮನಸ್ಸನ್ನು ಹತೋಟಿಯಲ್ಲಿದ್ದೆ. ಆದರಿಂದು ಇದೇನಾಗಿ ಹೋಯಿತು? ಒಂದು ಸಂದೇಶ ತನ್ನ ಪ್ರೀತಿಯನ್ನೇ ಕಸಿದುಕೊಂಡಿತೇ?' - ಹೀಗೆ ಮುಂತಾಗಿ ಚಿಂತಿಸುತ್ತಾ ಗಿರಗಿರನೆ ತಿರುಗುತ್ತಿದ್ದ ಫ್ಯಾನನ್ನೇ ನೋಡುತ್ತಾ ಕೂತಿದ್ದ.

ಅವನಿಗೆ ಊಟ-ತಿಂಡಿಗಳಾವುದೂ ರುಚಿಸದಾಯಿತು. ಅವಳ ನೆನಪುಗಳೇ ಅತಿಯಾಗಿ ಹಿಂಸೆಯೆನಿಸತೊಡಗಿತು. ಅಪ್ಪ-ಅಮ್ಮನ ನೆನಪು ಕಾಡತೊಡಗಿತು. ಹೆಚ್ಚು ದಿನ ಇಲ್ಲಿರಲಾರೆನೆಂದೆನಿಸಿ ನಾಲ್ಕು ದಿನಗಳ ರಜೆಯನ್ನು ತೆಗೆದುಕೊಂಡು ಊರಿಗೆ ಹೊರಟನು. ಮನೆಯೊಳಕ್ಕಡಿಯಿಟ್ಟು ಅಮ್ಮನ ಮುಖ ನೋಡುತ್ತಲೇ ಮನಸಿನಲ್ಲಿ ಕಾಡುತ್ತಿದ್ದ ಗೆಳತಿಯ ಮುಖ ಮಂಜಿನಂತೆ ಕರಗತೊಡಗಿತು.

----------------->> <<----------------

**CHAPTER - 5**

ಅವಳ ಮುಖ ಕರಗಿಹೋಗುತ್ತಿದ್ದಂತೆಯೇ ತನ್ನ ಯೋಚನಾ ಲಹರಿಯಿಂದ ಹೊರಬಂದ. ವಾಸ್ತವಿಕ ಜಗತ್ತಿಗೆ ಬರುತ್ತಿದ್ದಂತೆಯೇ ಚಳಿಯಾವರಿಸಿತು. ಮಳೆ ಯಾವಾಗಲೋ ನಿಂತು ಹೋಗಿತ್ತು. ಕೈಗಳನ್ನು ಬಿಗಿಯಾಗಿ ದೇಹಕ್ಕೆ ಅಮುಕಿ ಹಿಡಿದುಕೊಂಡು ನದಿಯತ್ತ ನೋಡಿದ. ಕತ್ತಲಿನಲ್ಲಿ ಏನೂ ಕಾಣಿಸದಿದ್ದರೂ ಹರಿವಿನ ದನಿಯನ್ನು ಆಲಿಸಿದ. ಪ್ರಶಾಂತವಾಗಿ ಪ್ರವಹಿಸುತ್ತಿದ್ದ ನೀರಿನ ಜುಳುಜುಳು ನಿನಾದ ಕಿವಿಗೆ ಇಂಪಾಗಿ ಬಡಿಯುತ್ತಿತ್ತು. ತನ್ನ ಮನಸ್ಸು ಕೂಡ ಈಗ ನದಿಯ ನೀರಿನಂತೆಯೇ ಶಾಂತಸ್ಥಿತಿಗೆ ಮರಳಿದೆ, ಎಲ್ಲವೂ ಸ್ವಲ್ಪ ದಿನದಲ್ಲಿ ಸರಿಯಾಗಬಹುದು ಎಂದುಕೊಂಡ.

ತಾನಿಲ್ಲಿಗೆ ಬಂದು ಬಹಳ ಸಮಯವಾಗಿದೆ, ಮನೆಯಲ್ಲಿ ಅಮ್ಮ ಗಾಬರಿಪಡುತ್ತಿರಬಹುದು, ತಾನೆಷ್ಟು ಹೊತ್ತು ಯೋಚನೆ ಮಾಡುತ್ತಾ ನಿಂತುಬಿಟ್ಟೆ ಎಂದು ತನ್ನಷ್ಟಕ್ಕೆ ನಗುತ್ತಾ ತಲೆ ಕೆರೆದುಕೊಂಡು ಹಿಂದೆ ತಿರುಗಿ ಹತ್ತು ಹೆಜ್ಜೆಗಳನ್ನಿಡುವಷ್ಟರಲ್ಲಿ ಏನೋ ನೆನಪಾಗಿ ಜೇಬಿಗೆ ಕೈ ಹಾಕಿದ. ಅದಿನ್ನೂ ಅಲ್ಲೇ ಭದ್ರವಾಗಿತ್ತು. ಮತ್ತೆ ತಾನು ಹೊಸ ಜೀವನವನ್ನು ಆರಂಬಿಸಬೇಕಾದರೆ ಅವಳ ನೆನಪಿನ ಯಾವುದೇ ವಸ್ತುಗಳೂ ಇರಬಾರದೆಂದುಕೊಂಡು ಕೊನೆಯ ಬಾರಿಗೆಂಬಂತೆ ಕೈಯಲ್ಲಿಡಿದು ಎದೆಗೊಮ್ಮೆ ಒತ್ತಿಕೊಂಡು ನಿಡಿದಾದ ಉಸಿರುಬಿಟ್ಟ.

----------------->> **THE END** <<----------------

ಸಮಯ ರಾತ್ರಿ ಒಂಬತ್ತಾದರೂ ಮನೆಗೆ ಮಗ ಬಾರದಿರುವುದನ್ನು ನೋಡಿ, ಹೆಂಡತಿಯ ಒತ್ತಾಯದ ಮೇರೆಗೆ ಹೊರಟಿದ್ದರು ರಾಮರಾಯರು. ನದಿಯ ಬಳಿ ಹೋಗಿಬರುತ್ತೇನೆಂದು ಮಗನು ಹೇಳಿ ಹೋಗಿದ್ದರಿಂದ ನೇರವಾಗಿ ದಂಡೆಯ ಬಳಿಯೇ ಸಾಗಿದರು. ಅವನು ಯಾವಾಗಲೂ ಕೂರುತ್ತಿದ್ದ ಜಾಗದತ್ತ ಟಾರ್ಚ್ ಬೆಳಕನ್ನು ಹಾಯಿಸಿದಾಗ ಅವರಿಗೆ ಕಂಡದ್ದು ಆತ ಯಾವಾಗಲೂ ತನ್ನ ಬಳಿಯೇ 24 ಗಂಟೆಯೂ ಇಟ್ಟುಕೊಂಡಿರುತ್ತಿದ್ದ ಕೆಂಪು ಬಣ್ಣದ ಟೆಡ್ಡಿ-ಬಿಯರ್ ಕೀ-ಚೈನ್ ಮಾತ್ರ........

**~ ಅಕ್ಷರ ಹೆಗಡೆ**

**ತಾರೀಖು :** 14 ಫೆಬ್ರುವರೀ 2015